<u>ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವತಿಯಿಂದ ಹಾಲಿ ಈ ಕೆಳಕಂಡ ಕಾರ್ಯಕ್ರಮಗಳನ್ನು ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್ ಮೂಲಕ ಅನುಷ್ಠಾನಗೊಳಿಸಲಾಗುತ್ತಿದೆ.</u>

1.ಜಿಲ್ಲಾ ಪಂಚಾಯತ್ ಮೂಲಕ ಅನುಷ್ಠಾನಗೊಳಿಸಲಾಗುತ್ತಿರುವ ಕಾರ್ಯಕ್ರಮಗಳು:-

ಅ) ನಿರ್ಗತಿಕ ಮಕ್ಕಳ ಕುಟೀರ

ಆ) ಶಿಶು ಕಲ್ಯಾಣ ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರಿಗೆ ಹೆಚ್ಚುವರಿ ಗೌರವಧನ ಪಾವತಿ.

ಇ) ಸಮಗ್ರ ಶಿಶು ಅಭಿವೃದ್ಧಿ ಯೋಜನೆ, ಐಸಿಡಿಎಸ್ ಮಾನಿಟರಿಂಗ್ ಘಟಕ

ಈ) ಅಂಗವಿಕಲರ ಮತ್ತು ರೋಗಗ್ರಸ್ಥರ ವೃದ್ಧಾಶ್ರಮ.

2. ತಾಲ್ಲೂಕು ಪಂಚಾಯತ್ ಮೂಲಕ ಅನುಷ್ಠಾನಗೊಳಿಸುತ್ತಿರುವ ಕಾರ್ಯಕ್ರಮಗಳು:-

ಅ) ಸಮಗ್ರ ಶಿಶು ಅಭಿವೃದ್ಧಿ ಯೋಜನೆ

ಆ) ಅಂಗನವಾಡಿ ಕಟ್ಟಡಗಳ ನಿರ್ಮಾಣ

ಇ) ಗ್ರಾಮೀಣ ಪ್ರದೇಶದ ಹೆಣ್ಣು ಮಕ್ಕಳಿಗೆ ಹಾಜರಾತಿ ಶಿಷ್ಯವೇತನ

ಈ) ಪೂರಕ ಪೌಷ್ಠಿಕ ಆಹಾರ ಕಾರ್ಯಕ್ರಮ.

ಉ) ಶಿಶುಪಾಲನಾ ಕೇಂದ್ರ

<u>ಜಿಲ್ಲಾ ಪಂಚಾಯತ್ ಕಾರ್ಯಕ್ರಮಗಳ ಬಗ್ಗೆ ವಿವರ:</u>

<u>1. ನಿರ್ಗತಿಕ ಮಕ್ಕಳ ಕುಟೀರಗಳು</u> : ನಿರ್ಗತಿಕ ಹಾಗೂ ಅನಾಥ ಮಕ್ಕಳ ರಕ್ಷಣೆ, ಪೋಷಣೆ ಹಾಗೂ ವಿದ್ಯಾಭ್ಯಾಸವನ್ನು ಭರಿಸಬೇಕಾದ ಲೆಕ್ಕಶೀರ್ಷಿಕೆ 2235-02-102-0-53 (ಯೋಜನೆ) ಶಿಶು ಕಲ್ಯಾಣ (ಈ ಶೀರ್ಷಿಕೆಯಡಿ ನಿರ್ಗತಿಕ ಮಕ್ಕಳ ಕುಟೀರ ಮತ್ತು ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರಿಗೆ ಹೆಚ್ಚುವರಿ ಗೌರವಧನ ಪಾವತಿಸಲಾಗುತ್ತದೆ. ಇಲಾಖೆಯು ಸ್ವಯಂ ಸೇವಾ ಸಂಸ್ಥೆಗಳಿಗೆ ಅನುದಾನ ನೀಡಿ ಈ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುತ್ತಿದೆ. ಮೈಸೂರು ಜಿಲ್ಲೆಯಲ್ಲಿ ಇಂತಹ 21 ಕುಟೀರಗಳು ಅನುದಾನ ಪಡೆಯುತ್ತಿವೆ. ಸುಮಾರು 550 ಮಕ್ಕಳು ಈ ಕುಟೀರಗಳಲ್ಲಿ ಪ್ರಯೋಜನ ಪಡೆಯುತ್ತಿದ್ದಾರೆ. ಯೋಜನಾ ಲೆಕ್ಕಶೀರ್ಷಿಕೆಯಡಿ 3 ಕುಟೀರಗಳು ವೆಚ್ಚ ಭರಿಸಲಾಗುತ್ತಿದೆ. 2006-07ನೇ ಸಾಲಿಗೆ ಯೋಜನೆ ಲೆಕ್ಕ ಶೀರ್ಷಿಕೆಯಡಿ 3.24 ಲಕ್ಷ ನಿಗಧಿಯಾಗಿದ್ದು, ಜಿಲ್ಲಾ ಪಂಚಾಯತ್ ನಿಂದ 3.22 ರೂ. ಬಿಡುಗಡೆಯಾಗಿರುತ್ತದೆ. 3.17 ಲಕ್ಷಗಳ ಖರ್ಚು ಭರಿಸಲಾಗಿರುತ್ತದೆ. ಯೋಜನೇತರ ಲೆಕ್ಕ ಶೀರ್ಷಿಕೆಯಡಿ 18 ಕುಟೀರಗಳ ವೆಚ್ಚ ಭರಿಸುವುದು. 10.58 ಲಕ್ಷಗಳು ನಿಗಧಿಯಾಗಿದ್ದು, ಜಿಲ್ಲಾ ಪಂಚಾಯತ್ ನಿಂದ ಪೂರ್ಣವಾಗಿ ಬಿಡುಗಡೆಯಾಗಿರುತ್ತವೆ. ಒಟ್ಟು 10.30 ಲಕ್ಷಗಳ ಖರ್ಚು ಭರಿಸಲಾಗುತ್ತದೆ.

ಸರ್ಕಾರಿ ಆದೇಶದ ರೀತ್ಯಾ ಒಂದು ಕುಟೀರದಲ್ಲಿ 25 ಮಕ್ಕಳ ಪಾಲನೆಗೆ ಅವಕಾಶವಿರುತ್ತದೆ. ಈ ಯೋಜನೆಯಡಿ ಅನಾಥ ಮಕ್ಕಳ ಪಾಲನೆ ಮತ್ತು ಪೋಷಣೆಗಾಗಿ ಪ್ರತಿ ಮಗುವಿಗೆ ಪ್ರತಿ ತಿಂಗಳಿಗೆ ರೂ.400 ಗಳನ್ನು ಮತ್ತು ಪ್ರತಿ ಮಗುವಿಗೆ ಪ್ರತಿ ತಿಂಗಳಿಗೆ ರೂ. 50=00 ರಂತೆ ಬಾಡಿಗೆ ಪಾವತಿಸಲಾಗುತ್ತಿದೆ. ಒಟ್ಟು ವೆಚ್ಚದ ಶೇ.90 ನ್ನು ಸರ್ಕಾರ ಮಂಜೂರು ಮಾಡಲಾಗುವುದು. ಶೇ. 10 ರಷ್ಟು ವೆಚ್ಚವನ್ನು ನಿರ್ಗತಿಕ ಮಕ್ಕಳ ಕುಟೀರಗಳನ್ನು ನಡೆಸುತ್ತಿರುವ ಸ್ವಯಂ ಸೇವಾ ಸಂಸ್ಥೆ ಭರಿಸಬೇಕು.

ಜಿಲ್ಲೆಯಲ್ಲಿ ನಿರ್ಗತಿಕ ಮಕ್ಕಳ ಕುಟೀರಗಳನ್ನು ನಡೆಸುತ್ತಿರುವ ಸೇವಾ ಸಂಸ್ಥೆಗಳ ಪಟ್ಟಿಯನ್ನು ಅನುಬಂಧ – 1 ರಲ್ಲಿ ನೀಡಿದೆ.

2. <u>ಅಂಗನವಾಡಿ ಕಾರ್ಯಕರ್ತೆ / ಸಹಾಯಕಿಯರಿಗೆ ಹೆಚ್ಚುವರಿ ಗೌರವಧನ:</u> ಈ ಕೆಳಕಂಡ ದರಗಳಲ್ಲಿ ಅಂಗವನಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರಿಗೆ ಕೇಂದ್ರ ಸರ್ಕಾರದಿಂದ ಪಾವತಿಸಲಾಗುತ್ತಿರುವ ಗೌರವಧನ ದೊಂದಿಗೆ ರಾಜ್ಯ ಸರ್ಕಾರದಿಂದ ಹೆಚ್ಚುವರಿ ಗೌರವಧನ ಪಾವತಿಸಲಾಗುತ್ತಿದೆ. 2006–07ನೇ ಸಾಲಿಗೆ 230.50 ಲಕ್ಷ ರೂ ಒದಗಿಸಲಾಗಿದ್ದು, ಒಟ್ಟು ರೂ.219.13 ಲಕ್ಷ ಖರ್ಚು ಭರಿಸಲಾಗಿದೆ.

1. ಅಂಗನವಾಡಿ ಕಾರ್ಯಕರ್ತೆಯರಿಗೆ – ಮಾಹೆಯಾನ ರೂ. 550.00
2. ಅಂಗನವಾಡಿ ಸಹಾಯಕಿಯರಿಗೆ – ಮಾಹೆಯಾನ ರೂ. 275.00

ಇದೇ ಲೆಕ್ಕ ಶೀರ್ಷಿಕೆಯಡಿ 3 ನಿರ್ಗತಿಕ ಮಕ್ಕಳ ಕುಟೀರಗಳಿಗೂ ವೆಚ್ಚ ಭರಿಸಲಾಗುತ್ತದೆ. ಇದಕ್ಕಾಗಿ 3.24 ಲಕ್ಷ ರೂ. ಒದಗಿಸಲಾಗಿದೆ. ಕಾರ್ಯಕ್ರಮದ ವಿವರ ಮೇಲ್ಕಂಡಂತೆ ಇದೆ.

3. <u>ಐಸಿಡಿಎಸ್ ಮಾನಿಟರಿಂಗ್ ಘಟಕ / ಲೆಕ್ಕ ಶೀರ್ಷಿಕೆ ಮತ್ತು ಟಿಪ್ಪಣಿ</u> (2235–02–102–0–56 ಕೇಂದ್ರ ಪುರಸ್ಕೃತ ಯೋಜನೆ)
ಉಪ ನಿರ್ದೇಶಕರ ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಜಿಲ್ಲಾ ನಿರೂಪಣಾಧಿಕಾರಿಗಳು ಮತ್ತು ಇತರ 12 ಸಿಬ್ಬಂದಿಗಳ ವೇತನ , ಭತ್ಯೆ ಹಾಗೂ ಆಡಳಿತಾತ್ಮಕ ವೆಚ್ಚ ಭರಿಸಲಾಗುತ್ತಿದೆ.

<u>ಅಂಗವಿಕಲರ ಮತ್ತು ಹಿರಿಯ ನಾಗರೀಕರ ಕಲ್ಯಾಣ ಇಲಾಖೆಯಿಂದ ನಡೆಸಲ್ಪಡುತ್ತಿರುವ ಕಾರ್ಯಕ್ರಮಗಳು:</u>

3. <u>ವೃದ್ದರ ಅಂಗವಿಕಲರ ರೋಗಗ್ರಸ್ಥರ ಪಾಲನೆಗಾಗಿ ಸ್ವಯಂ ಸೇವಾ ಸಂಸ್ಥೆಗಳು:–</u> ವೃದ್ದರ ಅಂಗವಿಕಲರ ಪಾಲನೆಗಾಗಿ ಸ್ವಯಂ ಸೇವಾ ಸಂಸ್ಥೆಗಳಿಗೆ ಅನುದಾನ ನೀಡಿ ವೃದ್ದಾಶ್ರಮ ನಡೆಸಲಾಗುತ್ತಿದೆ. ಜಿಲ್ಲೆಯಲ್ಲಿ ಜೆ.ಎಸ್.ಎಸ್. ಸಂಸ್ಥೆ ವತಿಯಿಂದ ಮೈಸೂರು ನಗರದಲ್ಲಿ ಒಂದು ಅನುದಾನಿತ ವೃದ್ದಾಶ್ರಮವನ್ನು ನಡೆಸಲಾಗುತ್ತಿದೆ. 25 ಜನ ವೃದ್ದರು ಇದರ ಪ್ರಯೋಜನ ಪಡೆಯುತ್ತಿದ್ದಾರೆ. 2006–07ನೇ ಸಾಲಿಗೆ ರೂ. 1.97 ಲಕ್ಷ ನಿಗಧಿಪಡಿಸಿದ್ದು, ಜಿಲ್ಲಾ ಪಂಚಾಯತ್ ನಿಂದ ಪೂರ್ಣವಾಗಿ ಬಿಡುಗಡೆಯಾಗಿದ್ದು, ರೂ. 1.97 ಲಕ್ಷ ಖರ್ಚು ಭರಿಸಲಾಗಿರುತ್ತದೆ.

## ತಾಲ್ಲೂಕು ಪಂಚಾಯತ್ ಕಾರ್ಯಕ್ರಮಗಳು: ಕೇಂದ್ರ ಪುರಸ್ಕೃತ ಯೋಜನೆ (ಶೇ.100) ಲೆಕ್ಕ ಶೀರ್ಷಿಕೆ 2235–02–102–0–55

**1. ಸಮಗ್ರ ಶಿಶು ಅಭಿವೃದ್ಧಿ ಸೇವೆಗಳ ಯೋಜನೆ:** 1975 ರಲ್ಲಿ ಈ ಯೋಜನೆಯನ್ನು ಕರ್ನಾಟಕ ರಾಜ್ಯದ ಟೀ.ನರಸೀಪುರ, ತಾಲ್ಲೂಕಿನಲ್ಲಿ ಪ್ರಾರಂಭಿಸಲಾಯಿತು. ನಂತರ ಜಿಲ್ಲೆಯ ಎಂಟು ತಾಲ್ಲೂಕುಗಳಲ್ಲಿ ಎಂಟು ಶಿಶು ಅಭಿವೃದ್ಧಿ ಯೋಜನೆಗಳನ್ನು ಈ ಕೆಳಕಂಡ ವರ್ಷಗಳಲ್ಲಿ ಪ್ರಾರಂಭಿಸಲಾಗಿರುತ್ತದೆ.

| ಕ್ರ.ಸಂ | ತಾಲ್ಲೂಕು/ಶಿಶು ಅಭಿವೃದ್ದಿ ಯೋಜನೆ ಹೆಸರು. | ಪ್ರಾರಂಭಿಸಲಾದ ವರ್ಷ | ಮಂಜೂರಾಗಿರುವಅಂಗನವಾಡಿಕೇಂದ್ರ ಗಳ ಸಂಖ್ಯೆ | ಮಿನಿಅಂಗನವಾಡಿಕೇಂದ್ರ. |
|---|---|---|---|---|
| 1 | 2 | 3 | 6 | 7 |
| 1 | ಟೀ.ನರಸೀಪುರ | 1975–76 | 302 | 03 |
| 2. | ಹುಣಸೂರು | 1980–81 | 281 | 10 |
| 3 | ಹೆಚ್.ಡಿ.ಕೋಟೆ | 1982–83 | 318 | 27 |
| 4 | ಮೈಸೂರು ನಗರ | 1983–84 | 142 | – |
| 5 | ನಂಜನಗೂಡು | 1990–91 | 544 | 6 |
| 6 | ಪಿರಿಯಾಪಟ್ಟಣ | 1993–94 | 289 | 12 |
| 7 | ಕೆ.ಆರ್.ನಗರ | 1993–94 | 277 | – |
| 8 | ಮೈಸೂರು (ಗ್ರಾ) | 1994–95 | 268 | 14 |
| | ಒಟ್ಟು | | 2421 | 77 |

ಸಮಗ್ರ ಶಿಶು ಅಭಿವೃದ್ಧಿ ಯೋಜನೆಯ ಮುಖ್ಯ ಉದ್ದೇಶಗಳು ಈ ಕೆಳಕಂಡಂತಿದೆ.

1. 6 ತಿಂಗಳಿನಿಂದ 6 ವರ್ಷದೊಳಗಿನ ಮಕ್ಕಳ ಗರ್ಭಿಣಿ, ಬಾಣಂತಿಯರ ಮತ್ತು ನ್ಯೂನ ಪೋಷಿತ ಮಕ್ಕಳ ಪೌಷ್ಠಿಕತೆ ಮಟ್ಟವನ್ನು ಸುಧಾರಿಸುವುದು.

2.ಮಕ್ಕಳ ಮಾನಸಿಕ ಸಾಮಾಜಿಕ ಮತ್ತು ಭೌತಿಕ ಬೆಳವಣಿಗೆಗೆ ಬುನಾದಿ ಹಾಕುವುದು.

3.ಶಿಶು ಮರಣ ನ್ಯೂನ ಪೋಷಣೆ ಮತ್ತು ಶಾಲೆ ಬಿಡುವುದನ್ನು ತಗ್ಗಿಸುವುದು.

ಶಿಶುವಿನ ಜನನ ಪೂರ್ವ ಅವಧಿಯಿಂದ, ಶಿಶು ಶಾಲೆಗೆ ಸೇರುವ ಅವಧಿಯವರೆಗೆ ಶಿಶುವಿನ ಆರೋಗ್ಯ, ಬೌದ್ದಿಕ ಹಾಗೂ ಮಾನಸಿಕ ಹಾಗೂ ಸಮಗ್ರ ಬೆಳವಣಿಗೆಗಾಗಿ ಕೇಂದ್ರ ಸರ್ಕಾರದ ಶೇ 100 ಅನುದಾನದಲ್ಲಿ ಶಿಶು ಅಭಿವೃದ್ದಿ ಯೋಜನೆಗಳು ಅನುಷ್ಠಾನಗೊಳ್ಳುತ್ತಿವೆ. ಮೈಸೂರು ಜಿಲ್ಲೆಯಲ್ಲಿ ನಗರ ಯೋಜನೆಯೂ ಸೇರಿದಂತೆ ಎಲ್ಲ ತಾಲ್ಲೂಕುಗಳಲ್ಲಿ 8 ಯೋಜನೆಗಳು ಕಾರ್ಯನಿರ್ವಹಿಸುತ್ತಿವೆ. ಈ ಯೋಜನೆಗಳಿಂದ ಜಿಲ್ಲೆಯ ಬಹುತೇಕ ಎಲ್ಲ ಗ್ರಾಮಗಳಲ್ಲೂ ಅಂಗನವಾಡಿ ಕೇಂದ್ರಗಳನ್ನು ತೆರೆಯಲಾಗಿದೆ. ಮೈಸೂರು ಜಿಲ್ಲೆಗೆ 2334 ಅಂಗನವಾಡಿ ಕೇಂದ್ರಗಳು ಮಂಜೂರಾಗಿದ್ದು, 2334 ಕಾರ್ಯನಿರತವಾಗಿವೆ. ಅಂಗನವಾಡಿ ಕೇಂದ್ರದ ಮೂಲಕ ಮಕ್ಕಳಿಗೆ ಈ ಕೆಳಕಂಡ ಸೇವೆಗಳನ್ನು

ಒದಗಿಸಲಾಗುತ್ತಿದೆ. 1.ಆರೋಗ್ಯ ತಪಾಸಣೆ, 2.ಶಾಲಾಪೂರ್ವಶಿಕ್ಷಣ, 3.ಪೂರಕ ಪೌಷ್ಠಿಕ ಆಹಾರ ವಿತರಣೆ, 4.ಪೌಷ್ಠಿಕ ಆಹಾರ ಹಾಗೂ ಆರೋಗ್ಯದ ಬಗ್ಗೆ ತಾಯಂದಿರಿಗೆ ಅರಿವು ಮೂಡಿಸುವುದು, 5.ರೋಗ ನಿರೋಧಕ ಲಸಿಕೆ ನೀಡುವುದು ಹಾಗೂ 6.ಮಾಹಿತಿ ಸೇವೆಗಳನ್ನು ಒದಗಿಸಲಾಗುತ್ತಿದೆ..

ಈ ಯೋಜನೆಯ ಪೂರ್ಣವೆಚ್ಚವನ್ನು ಕೇಂದ್ರ ಪುರಸ್ಕೃತ (ಶೇ. 100)ಅಡಿ ಅಂದರೆ ಲೆಕ್ಕ ಶೀರ್ಷಿಕೆ 2235–02–102–0–55 ರಡಿ ಭರಿಸಲಾಗುತ್ತಿದೆ. ಈ 8 ಶಿಶು ಅಭಿವೃದ್ದಿ ಯೋಜನೆಗಳಡಿ ಬರುವ ಅಧಿಕಾರಿಗಳು / ಸಿಬ್ಬಂದಿ ಯವರ ಸಂಬಳ, ಭತ್ಯೆ, ಅಂಗನವಾಡಿ ಕಾರ್ಯಕರ್ತೆಯರ / ಸಹಾಯಕಿಯರ ಗೌರವಧನ ಮತ್ತು ಆಡಳಿತಾತ್ಮಕ ವೆಚ್ಚವನ್ನು ಭರಿಸಲಾಗುತ್ತಿದೆ. ಈ ಲೆಕ್ಕ ಶೀರ್ಷಿಕೆಯಡಿ ವೇತನ / ಗೌರವಧನ ಪಡೆಯುತ್ತಿರುವವರ ವಿವರಗಳು ಈ ಕೆಳಕಂಡಂತಿದೆ.

1. ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು – 8 ಸಂಖ್ಯೆ
2. ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಸಿಬ್ಬಂದಿಗಳು – 177 ಸಂಖ್ಯೆ
3. ಆರೋಗ್ಯ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿಗಳು – 28 ಸಂಖ್ಯೆ

---------

ಒಟ್ಟು 213 ಸಂಖ್ಯೆ

---------

4. ಅಂಗನವಾಡಿ ಕಾರ್ಯಕರ್ತೆಯರು – 2334 ಸಂಖ್ಯೆ (2006–07ನೇ ಸಾಲಿನಲ್ಲಿ 87 ಅಂಗನವಾಡಿ ಕೇಂದ್ರಗಳು, 72 ಮಿನಿ ಅಂಗನವಾಡಿ
5. ಅಂಗನವಾಡಿ ಸಹಾಯಕಿಯರು – 2334 ಸಂಖ್ಯೆ (ಕೇಂದ್ರಗಳನ್ನು ಪ್ರಾರಂಭಿಸಲು ಸರ್ಕಾರದ ಆದೇಶ ನಿರೀಕ್ಷಿಸಲಾಗುತ್ತಿದೆ)

ಒಟ್ಟು :: 4881 ಸಂಖ್ಯೆ

2006–07ನೇ ಸಾಲಿಗೆ ಕೇಂದ್ರ ಪುರಸ್ಕೃತ ಯೋಜನೆಯಡಿ ಜಿಲ್ಲೆಗೆ ಒಟ್ಟು 825 ಲಕ್ಷ ಒದಗಿಸಲಾಗಿದ್ದು, ಜಿಲ್ಲಾ ಪಂಚಾಯತಿಯಿಂದ 547.50 ಲಕ್ಷ ಬಿಡುಗಡೆಯಾಗಿರುತ್ತದೆ. ಮಾರ್ಚ ಅಂತ್ಯದವರೆಗೆ ಒಟ್ಟು ರೂ. 665.15 ಲಕ್ಷಗಳನ್ನು ಅಂಗನವಾಡಿ ಕಾರ್ಯಕರ್ತೆಯರ ಹಾಗೂ ಸಹಾಯಕಿಯರ ಗೌರವಧನ, ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದವರ ವೇತನ ಭತ್ಯೆ ಆಡಳಿತಾತ್ಮಕ ಬಾಬ್ತು ಖರ್ಚು ಭರಿಸಲಾಗಿರುತ್ತದೆ. 30 ಮಾರ್ಚ 2007 ರಂದು 268.70 ಲಕ್ಷ ಸರ್ಕಾರದಿಂದ ಬಿಡುಗಡೆಯಾಗಿದೆ. ಆದರೆ ಸಕಾಲದಲ್ಲಿ ಬಿಡುಗಡೆಯಾಗದ ಕಾರಣ ಈ ಅನುದಾನ ಎನ್.ಎಂ.ಸಿ. ಮೂಲಕ ತಾಲ್ಲೂಕು ಪಂಚಾಯತ್ ಗಳಿಗೆ ಲಭ್ಯವಾಗಿಲ್ಲ.

ಅ. ಶಾಲಾ ಪೂರ್ವ ಶಿಕ್ಷಣ:– ಸಮಗ್ರ ಶಿಶು ಅಭಿವೃದ್ಧಿ ಯೋಜನೆಯ ಸೇವಾ ಸೌಲಭ್ಯಗಳಲ್ಲಿ ಶಾಲಾ ಪೂರ್ವ ಶಿಕ್ಷಣವು ಪ್ರಮುಖ ಸೇವೆಯಾಗಿದೆ. ಈ ಶಿಕ್ಷಣವು 3 ವರ್ಷದಿಂದ 6 ವರ್ಷದೊಳಗಿನ ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಅಡಿಪಾಯವನ್ನು ಹಾಕುವ ಮೂಲಭೂತ ಶಿಕ್ಷಣವಾಗಿದೆ. ಅಂಗನವಾಡಿ ಕೇಂದ್ರಗಳಲ್ಲಿ ಪ್ರಕೃತಿದತ್ತ ವಸ್ತುಗಳನ್ನು ಅಂದರೆ ಮಣ್ಣು ಕಲ್ಲು, ಬೀಜ, ಮರಳು, ಹಾಗೂ ಬಣ್ಣಕ್ಕೆ ಸಂಬಂಧಪಟ್ಟ ವಸ್ತುಗಳು ವಿವಿದ ರೀತಿಯ ಎಲೆಗಳು, ಹೂವುಗಳು ಮುಂತಾದವುಗಳಿಂದ ಶಾಲಾ ಪೂರ್ವ ಶಿಕ್ಷಣವನ್ನು ಯಶಸ್ವಿಯಾಗಿ ನಡೆಸಲು ಸಾಧ್ಯವಾಗಿದೆ. ಜೊತೆಗೆ ಮಕ್ಕಳಿಗೆ ಈ ವಸ್ತುಗಳನ್ನು ಬಳಸಿ ಶಿಕ್ಷಣ ನೀಡುತ್ತಿರುವುದರಿಂದ ಮಕ್ಕಳಲ್ಲಿ ಗ್ರಹಣಶಕ್ತಿ ಮತ್ತು ಕ್ರಿಯಾತ್ಮಕ ಬೆಳವಣಿಗೆಯನ್ನು ಅಭಿವೃದ್ದಿಗೊಳಿಸುವಂತೆ ಮಹತ್ತರವಾದ ಪಾತ್ರವನ್ನು ವಹಿಸಿದಂತಾಗುತ್ತದೆ. ಇದರಿಂದ ಮಕ್ಕಳಿಗೆ ಪರಿಸರದ ಪರಿಚಯವಾಗುವುದಲ್ಲದೆ, ಅವುಗಳ ಬಳಕೆ ಆಗುತ್ತಿರುವ ಉಪಯೋಗ ಮತ್ತು ಆಕೃತಿ ಮತ್ತು ಬಣ್ಣಗಳ ಪರಿಚಯ ಮಾಡಿಕೊಟ್ಟಂತಾಗುತ್ತದೆ. ಆಕರ್ಷಣೀಯ ಭೋದನಾ ವಿಧಾನದಿಂದ ಮಕ್ಕಳಲ್ಲಿ ಕಲಿಯುವ ಉತ್ಸುಕತೆ

ಹೆಚ್ಚಾಗುವುದಲ್ಲದೆ ಶಿಕ್ಷಣ ಮುಂದುವರಿಸಲು ಮತ್ತು ಶಾಲೆಗೆ ನಿರಂತರವಾಗಿ ಹಾಜರಾಗಲು ಸಾಧ್ಯವಾಗುತ್ತದೆ. ಶಾಲೆ ಬಿಡುವುದನ್ನು ತಪ್ಪಿಸಲು ಪ್ರಾರಂಭದಿಂದಲೇ ಕಲಿಸಿದಂತಾಗುತ್ತದೆ. ಅಂಗನವಾಡಿಗಳಲ್ಲಿ ಶಾಲಾ ಪೂರ್ವ ಶಿಕ್ಷಣದ ಮಹತ್ವದಿಂದ ಪ್ರಾಥಮಿಕ ಶಾಲೆಗಳಲ್ಲಿ ಮಕ್ಕಳ ಹಾಜರಾತಿ ವೃದ್ದಿಯಾಗಿರುವುದು ಸಮೀಕ್ಷೆಯೊಂದರಿಂದ ತಿಳಿದು ಬಂದಿರುತ್ತದೆ.

ಆ. ಆರೋಗ್ಯ ತಪಾಸಣೆ; ಸಮಗ್ರ ಶಿಶು ಅಭಿವೃದ್ದಿ ಯೋಜನೆಯ ಸೇವಾ ಸೌಲಭ್ಯಗಳಲ್ಲಿ ಆರೋಗ್ಯ ತಪಾಸಣಾ ಕಾರ್ಯಕ್ರಮವು ಪ್ರಮುಖವಾಗಿದೆ. ಪ್ರತಿ ಮಾಹೆ ಆರೋಗ್ಯ ಇಲಾಖೆಯ ವೈದ್ಯಾಧಿಕಾರಿಗಳಿಂದ ಗರ್ಭಿಣಿಯರ, ಬಾಣಂತಿಯರ ಹಾಗೂ 6 ವರ್ಷದೊಳಗಿನ ಮಕ್ಕಳಿಗೆ ಆರೋಗ್ಯ ತಪಾಸಣೆ ಹಾಗು ಸೂಕ್ತ ಅಗತ್ಯ ಮಾರ್ಗದರ್ಶನಗಳನ್ನು ನೀಡಲಾಗುತ್ತಿದೆ.

2. <u>ಪೂರಕ ಪೌಷ್ಟಿಕ ಆಹಾರ:</u> ಸಮಗ್ರ ಶಿಶು ಅಭಿವೃದ್ದಿ ಯೋಜನೆಯ ಮತ್ತೊಂದು ಮುಖ್ಯ ಸೇವೆಗಳಲ್ಲಿ ಮಕ್ಕಳ ಪೌಷ್ಠಿಕ ಹಾಗೂ ಆರೋಗ್ಯ ಮಟ್ಟವನ್ನು ಉತ್ತಮಪಡಿಸುವಂತಾಗಿದೆ. ಈ ಉದ್ದೇಶಕ್ಕಾಗಿ ಸರ್ಕಾರದ ವತಿಯಿಂದ ಅಂಗನವಾಡಿ ಕೇಂದ್ರಗಳ ಮೂಲಕ ಪೂರಕ ಪೌಷ್ಠಿಕ ಆಹಾರ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಈ ಕಾರ್ಯಕ್ರಮದನ್ವಯ 6 ವರ್ಷದೊಳಗಿನ ಮಕ್ಕಳಿಗೆ, ಗರ್ಭಿಣಿ, ಬಾಣಂತಿಯರಿಗೆ, ಕಿಶೋರಿಯರಿಗೆ, ನ್ಯೂನ ಪೋಷಿತ ಮಕ್ಕಳಿಗೆ ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರಿಗೆ ಸರ್ಕಾರ ನಿಗಧಿಪಡಿಸಿರುವ ಯುನಿಟ್ ವೆಚ್ಚದಂತೆ ಪೂರಕ ಪೌಷ್ಟಿಕ ಆಹಾರವನ್ನು ವಿತರಿಸಲಾಗುತ್ತದೆ.

6 ತಿಂಗಳಿಂದ 3 ವರ್ಷದೊಳಗಿನ ಮಕ್ಕಳಿಗೆ ಪ್ರತಿ ದಿನಕ್ಕೆ ರೂ. 2=00 ರಂತೆ, 3 ರಿಂದ 6 ವರ್ಷದೊಳಗಿನ ಮಕ್ಕಳಿಗೆ ರೂ. 1.50 ರಂತೆ, ಗರ್ಭಿಣಿ, ಬಾಣಂತಿಯರಿಗೆ, ಕಿಶೋರಿಯರಿಗೆ ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರಿಗೆ ರೂ. 3=00 ರಂತೆ, ವಾರ್ಷಿಕ 300 ದಿನಗಳು ಆಹಾರವನ್ನು ಅಂಗನವಾಡಿ ಕೇಂದ್ರಗಳ ಮೂಲಕ ಸರ್ಕಾರದ ಮಾರ್ಗಸೂಚಿಯಂತೆ ವಿತರಿಸಲಾಗುತ್ತದೆ. 2006-07ನೇ ಸಾಲಿಗೆ ಯೋಜನೆ ಲೆಕ್ಕ ಶೀರ್ಷಿಕೆಯಲ್ಲಿ 551.59 ಲಕ್ಷ ರೂ.ಗಳು ನಿಗಧಿಪಡಿಸಲಾಗಿದ್ದು, ಜಿಲ್ಲಾ ಪಂಚಾಯಿತಿಯಿಂದ 401.68 ಲಕ್ಷ ಬಿಡುಗಡೆಯಾಗಿರುತ್ತದೆ. 389.22 ಲಕ್ಷ ಖರ್ಚು ಭರಿಸಲಾಗಿರುತ್ತದೆ. ಹಾಗೆಯೇ ಯೋಜನೇತರ ಲೆಕ್ಕಶೀರ್ಷಿಕೆಯಲ್ಲಿ 457.90 ಲಕ್ಷ ಒದಗಿಸಲಾಗಿದ್ದು, ಜಿಲ್ಲಾ ಪಂಚಾಯತ್ ನಿಂದ ಪೂರ್ಣವಾಗಿ ಬಿಡುಗಡೆಯಾಗಿರುತ್ತದೆ. 268.72 ಲಕ್ಷ ಖರ್ಚು ಭರಿಸಲಾಗಿರುತ್ತದೆ. ವಾರ್ಷಿಕ ಭೌತಿಕ ಗುರಿ 154976 ನಿಗಧಿಪಡಿಸಿದ್ದು, 161243 ಸಾಧಿಸಲಾಗಿರುತ್ತದೆ.

4. ಅಂಗನವಾಡಿ ಕಟ್ಟಡ ನಿರ್ಮಾಣ:- ಅಂಗನವಾಡಿಗಳು ಸ್ವಂತ ಕಟ್ಟಡವನ್ನು ಹೊಂದುವ ದೃಷ್ಟಿಯಿಂದ ಪ್ರತಿ ಕಟ್ಟಡಕ್ಕೆ ರೂ.50000-00 ಅನುದಾನವನ್ನು ಇಲಾಖೆಯ ಮೂಲಕ ಹೊಂದಾಣಿಕೆ ಅನುದಾನವನ್ನಾಗಿ (ಮ್ಯಾಚಿಂಗ್ ಗ್ರಾಂಟ್ಸ್) ಆಯಾ ತಾಲ್ಲೂಕು ಪಂಚಾಯತ್‌ಗಳಿಗೆ ಬಿಡುಗಡೆ ಮಾಡಲಾಗುತ್ತದೆ. ನಿರ್ಮಾಣಕ್ಕೆ ಬೇಕಾದ ಒಟ್ಟು ಅಂದಾಜಿನ ಉಳಿದ ಮೊತ್ತ ತಾಲ್ಲೂಕು ಪಂಚಾಯತ್‌ವತಿಯಿಂದ ಅಂದರೆ 12ನೇ ಹಣಕಾಸು ಎಸ್.ಜಿ.ಆರ್.ವೈ ವತಿಯಿಂದ ಅಥವಾ ತಾಲ್ಲೂಕು ಪಂಚಾಯತ್ ವತಿಯಿಂದ ಲಭ್ಯವಿರುವ ಯಾವುದಾದರು ಅನುದಾನ ಭರಿಸಬಹುದಾಗಿರುತ್ತದೆ. 2006-07ನೇ ಸಾಲಿಗೆ ಒಟ್ಟು 5 ಲಕ್ಷ ಅನುದಾನ ಬಿಡುಗಡೆಯಾಗಿದ್ದು, 10 ಕಟ್ಟಡಗಳ ಗುರಿಯನ್ನು ಹೊಂದಿದ್ದು, 10 ಕಟ್ಟಡಗಳ ಸಾಧನೆಯಾಗಿರುತ್ತದೆ.

5. <u>ಗ್ರಾಮಾಂತರ ಪ್ರದೇಶದ ಹೆಣ್ಣು ಮಕ್ಕಳಿಗೆ ಹಾಜರಾತಿ ಶಿಷ್ಯವೇತನ:–</u> ಗ್ರಾಮಾಂತರ ಪ್ರದೇಶದಲ್ಲಿ ಹೆಣ್ಣು ಮಕ್ಕಳು ಶಾಲೆಯನ್ನು ತಪ್ಪಿಸಲು ಹಾಗೂ ಹೆಣ್ಣು ಮಕ್ಕಳ ಸಾಕ್ಷರತೆಯನ್ನು ಹೆಚ್ಚಿಸುವ ಸಲುವಾಗಿ ಅರ್ಥಿಕ ಸಹಾಯ ನೀಡಲಾಗುವುದು. ಮಾನ್ಯತೆ ಪಡೆದ ವಿದ್ಯಾಸಂಸ್ಥೆಗಳಲ್ಲಿ ವ್ಯಾಸಂಗ ಮಾಡುತ್ತಿರುವ, ಮೊದಲನೇ ಪ್ರಯತ್ನದಲ್ಲಿ ಉತ್ತೀರ್ಣರಾಗಿ ಶೇಕಡ 80 ರಷ್ಟು ಹಾಜರಾತಿ ಪಡೆದಿರುವ 5ನೇ ತರಗತಿಯಿಂದ 10ನೇ ತರಗತಿವರೆಗಿನ ವಿದ್ಯಾರ್ಥಿನಿಯರಿಗೆ ಈ ಶಿಷ್ಯವೇತನವನ್ನು ನೀಡಲಾಗುವುದು. ಆದರೆ ಇತ್ತೀಚಿನ ಆದೇಶದಂತೆ ಈ ಯೋಜನೆಯನ್ನು ನವೀಕರಣ ವಿದ್ಯಾರ್ಥಿಗಳಿಗೆ ಮಾತ್ರ ಮಂಜೂರಾತಿ ನೀಡಬೇಕಾಗಿರುತ್ತೆ. 5 ರಿಂದ 7ನೇ ತರಗತಿ ವರೆಗೆ ತಿಂಗಳಿಗೆ 25 ರೂ.ಗಳಂತೆ 10 ತಿಂಗಳಿಗೆ ಮತ್ತು 8 ರಿಂದ 10ನೇ ತರಗತಿ ವರೆಗೆ 50 ರೂ.ನಂತೆ 10 ತಿಂಗಳಿಗೆ ನೀಡಲಾಗುವುದು 2006–07ನೇ ಸಾಲಿಗೆ ಯೋಜನೆ ಲೆಕ್ಕ ಸೀರ್ಷಿಕೆಯಡಿ ವಾರ್ಷಿಕ ಗುರಿ2.74 ಲಕ್ಷ ನಿಗಧಿ ಪಡಿಸಿದ್ದು ಜಿಲ್ಲಾ ಪಂಚಾಯತ್ ನಿಂದ ಪೂರ್ಣವಾಗಿ ಬಿಡುಗಡೆಯಾಗಿದ್ದು 0.30 ರೂ. ಮಾತ್ರ ಖರ್ಚು ಭರಿಸಲಾಗಿರುತ್ತದೆ.

5. ಶಿಶು ಪಾಲನಾ ಕೇಂದ್ರ: ವ್ಯವಸಾಯ ಹಾಗೂ ಇನ್ನಿತರ ವೃತ್ತಿ ನಿರತ ಮಹಿಳೆಯರ 0–3 ವರ್ಷದ ಮಕ್ಕಳಿಗೆ ಗ್ರಾಮಾಂತರ ಹಾಗೂ ನಗರ ಪ್ರದೇಶಗಳಲ್ಲಿ ಆಶ್ರಯ ನೀಡಲು ಶಿಶು ಪಾಲನಾ ಕೇಂದ್ರಗಳನ್ನು ಪ್ರಾರಂಭಿಸಲು ಸ್ವಯಂ ಸೇವಾ ಸಂಸ್ಥೆಗಳಿಗೆ ಧನ ಸಹಾಯವನ್ನು ನೀಡಲಾಗುವುದು. ಶಿಶು ಪಾಲನಾ ಕೇಂದ್ರದ ಶೇ. 90 ರಷ್ಟು ಅನುದಾನವನ್ನು ಜಿಲ್ಲಾ ಪಂಚಾಯತ್ ಯಿಂದ ಉಳಿದ ಶೇ. 10 ರಷ್ಟನ್ನು ಸ್ವಯಂ ಸೇವಾ ಸಂಸ್ಥೆಗಳು ಭರಿಸಬೇಕಾಗುತ್ತದೆ. ಈ ಜಿಲ್ಲೆಯಲ್ಲಿ ಒಟ್ಟು 3 ಶಿಶು ಪಾಲನಾ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. 2006–07ನೇ ಸಾಲಿಗೆ 0.27 ರೂ. ಅನುದಾನ ನಿಗಧಿಪಡಿಸಿದ್ದು ಜಿಲ್ಲಾ ಪಂಚಾಯತ್ ಯಿಂದ 0.20 ರೂ. ಬಿಡುಗಡೆಯಾಗಿರುತ್ತದೆ. ರೂ. 0.20 ಖರ್ಚು ಭರಿಸಲಾಗಿರುತ್ತದೆ.

ಉಪ ನಿರ್ದೇಶಕರು,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ,
ಮೈಸೂರು.

# ಅನುಬಂಧ – 1

## ಮೈಸೂರು ಜಿಲ್ಲೆಯಲ್ಲಿ ಸ್ವಯಂ ಸೇವಾ ಸಂಸ್ಥೆಗಳ ವತಿಯಿಂದ ನಡೆಸಲ್ಪಡುತ್ತಿರುವ ನಿರ್ಗತಿಕ ಮಕ್ಕಳ ಕುಟೀರಗಳ ಮಾಹಿತಿ.

| ಕ್ರ.ಸಂ. | ನಿರ್ಗತಿಕ ಮಕ್ಕಳ ಕುಟೀರಗಳ ಹೆಸರು ಮತ್ತು ಪೂರ್ಣ ವಿಳಾಸ | ನಡೆಸುತ್ತಿರುವ ಕುಟೀರಗಳ ಸಂಖ್ಯೆ | |
|---|---|---|---|
| | | ಯೋಜನೆ | ಯೋಜನೇತರ |
| 1 | 2 | 3 | 4 |
| 1. | ಶ್ರೀ ಆದಿಚುಂಚನಗಿರಿ ಗುರುಕುಲ ಅನಾಥಾಲಯ, ನಿರ್ಗತಿಕ ಮಕ್ಕಳ ಕುಟೀರ ಚುಂಚನಕಟ್ಟೆ ಕೆ.ಆರ್.ನಗರ | – | 4 |
| 2 | ಸೇಂಟ್ ಅಂತೋಣಿ ನಿರ್ಗತಿಕ ಮಕ್ಕಳ ಕುಟೀರ ಗುಡ್ ಶೆಫರ್ಡ, ಮೈಸೂರು. | – | 2 |
| 3 | ವೈಶಾಲಿ ಶಿಕ್ಷಣ ಸಂಸ್ಥೆ ನಿರ್ಗತಿಕ ಮಕ್ಕಳ ಕುಟೀರ ಸಿದ್ದಾರ್ಥನಗರ, ಮೈಸೂರು. | – | 1 |
| 4 | ಶ್ರೀ ಜೈನ್ ಎಜುಕೇಷನ್ ಸೊಸೈಟಿ ನಿರ್ಗತಿಕ ಮಕ್ಕಳ ಕುಟೀರ ನಂ.4 ಮಾನಂದವಾಡಿ ರಸ್ತೆ, ಮೈಸೂರು | 1 | 1 |
| 5 | ವಸಂತ ಶಿಕ್ಷಣ ಸಂಸ್ಥೆ ನಿರ್ಗತಿಕ ಮಕ್ಕಳ ಕುಟೀರ ನಂ. 664 ಬನ್ನೂರು ಮುಖ್ಯ ರಸ್ತೆ, ಯರಗನಹಳ್ಳಿ, ಮೈಸೂರು | – | 1 |
| 6 | ಶ್ರೀ ಚಂದ್ರಮೌಳೇಶ್ವರ ನಿರ್ಗತಿಕ ಮಕ್ಕಳ ಕುಟೀರ ಮಾದಾಪುರ ಹೆಚ್.ಡಿ.ಕೋಟೆ. ತಾ. | – | 1 |
| 7 | ಮಹಾಬೋಧಿ ಮೈತ್ರಿ ಮಂಡಳಿ ನಿರ್ಗತಿಕ ಮಕ್ಕಳ ಕುಟೀರ ಸರಸ್ವತಿ ಪುರಂ ನಂ.6 ಈಜುಕೊಳ್ಳದ ರಸ್ತೆ, ಮೈಸೂರು. | – | 2 |
| 8 | ಜೆ.ಎಸ್.ಎಸ್. ನಿರ್ಗತಿಕ ಮಕ್ಕಳ ಕುಟೀರ ಹುಲ್ಲಹಳ್ಳಿ, ನಂಜನಗೂಡು ತಾಲ್ಲೂಕು | – | 1 |
| 9 | ಚಾಮುಂಡಿ ಮಕ್ಕಳ ಮನೆ ನಿರ್ಗತಿಕ ಮಕ್ಕಳ ಕುಟೀರ ನಂ.ಎ. 2ನೇ ಹಂತ ಬೃಂದಾವನ ಬಡಾವಣೆ, ಮೈಸೂರು. | – | 1 |
| 10 | ಜೆ.ಎಸ್.ಎಸ್. ನಿರ್ಗತಿಕ ಮಕ್ಕಳ ಕುಟೀರ ಸುತ್ತೂರು ನಂಜನಗೂಡು ತಾಲ್ಲೂಕು | – | 1 |
| 11 | ಬೀರೇಶ್ವರ ಶಿಕ್ಷಣ ಸಂಸ್ಥ ನಿರ್ಗತಿಕ ಮಕ್ಕಳ ಕುಟೀರ ಯಡಿಯಾಲ ನಂಜನಗೂಡು ತಾ. | – | 2 |
| 12 | ರೋಸರಿ ಶಿಕ್ಷಣ ಸಂಸ್ಥೆ, ನಿರ್ಗತಿಕ ಮಕ್ಕಳ ಕುಟೀರ ಶೆಟ್ಟಿನಾಯಕನಹಳ್ಳಿ, ಬೀರಿಹುಂಡಿ ಅಂಚೆ, ಮೈಸೂರು ತಾ. | – | 1 |
| 13 | ಆದಿಗುರು ಶ್ರೀ ರೇಣುಕಾಚಾರ್ಯ ನಿರ್ಗತಿಕ ಮಕ್ಕಳ ಕುಟೀರ ಕರ್ಪೂರವಳ್ಳಿ, ಕೆ.ಆರ್.ನಗರ | 2 | – |
| | ಒಟ್ಟು :: | 03 | 18 |